ACHARYA SCHOOL OF DESIGN
LIBRARY
Date..........
BENGALURU - 560 107

**AECKA-24**

Reg. No.

**II Semester B.Sc. FAD/I.D.D./B.V.A. Degree Examination, June - 2025**

**ವಿನ್ಯಾಸ ಸಂಪದ**

**ಸಂಕ್ರಾಂತಿ ಮತ್ತು ಒಡಲಾಳ**

**(SEP Scheme Fresher)**

**Time : 3 Hours** **Maximum Marks : 80**

**I. ಯಾವುದಾದರೂ ಐದು ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.** **(5×2=10)**

1. ಬಸವಣ್ಣನ ಪವಾಡಗಳ ಬಗ್ಗೆ ಕೆಂಚ ವಿರೋಧಿಸಿದ್ದು ಹೇಗೆ?
2. ಶರಣರಾದ ಮೇಲೆ ಏನು ಬಿಡಬೇಕು ಎಂದು ರುದ್ರ ಹೇಳುತ್ತಾನೆ?
3. ಜನಕ್ಕೆ ಉಷಾ ಏನು ಬೇಕಾಗಿದೆ ಎಂದು ಹೇಳುತ್ತಾಳೆ?
4. ಬಿಜ್ಜಳನ ಮುಂದೆ ರುದ್ರ ತಾನೊಬ್ಬ ಶರಣ ಎಂಬುದನ್ನು ಹೇಗೆ ಅಭಿವ್ಯಕ್ತಿಸುತ್ತಾನೆ?
5. ಸಾಕವ್ವನ ಮಕ್ಕಳನ್ನು ಪರಿಚಯಿಸಿ.
6. ಸಾಕವ್ವ ಯಾರಿಗೆ ಆಸ್ತಿ ಬರೆದುಕೊಡುತ್ತೇನೆ ಎಂದು ಹೇಳುತ್ತಾಳೆ?
7. ಗುರುಸಿದ್ದ ಗೌರಮ್ಮನ ಹಿರಿಯ ಮಗನನ್ನು ಏನೆಂದು ಕರೆಯುತ್ತಿದ್ದನು? ಏಕೆ?
8. ಸ್ಕೂಲಿನಲ್ಲಿ ಕೊಟ್ಟ ಉಪ್ಪಿಟ್ಟನ್ನು ಶಿವು ಏನು ಮಾಡುತ್ತಿದ್ದನು?

**II. ಯಾವುದಾದರೂ ಆರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.** **(6×5=30)**

1. ಉಜ್ಜ ತನ ಮಗ ರುದ್ರನ ಬಗ್ಗೆ ಯಾವ ರೀತಿಯ ನಿಲುವನ್ನು ತಳೆದಿದ್ದ?
2. ಉಷಾ–ರುದ್ರರ ಪರಿಚಯವಾದ ಸಂದರ್ಭವನ್ನು ಬರೆಯಿರಿ.
3. ಬ್ರಾಹ್ಮಣರು ಬಿಜ್ಜಳನ ಹತ್ತಿರ ನ್ಯಾಯ ಕೇಳಲು ಕಾರಣವೇನು? ತಿಳಿಸಿ.
4. ರುದ್ರ–ಉಷಾರ ಪ್ರೇಮ ಪ್ರಕರಣವನ್ನು ನಿರೂಪಿಸಿ.
5. ಸಾಕವ್ವ ಹುಂಜ ಹುಡುಕುವ ಪ್ರಸಂಗವನ್ನು ಬರೆಯಿರಿ.
6. ಚಲುವಮ್ಮ ಸಾಕವ್ವನ ಮೇಲೆ ಕೋಪಗೊಳ್ಳಲು ಕಾರಣವೇನು? ತಿಳಿಸಿ.
7. ಪುಟ್ಟಗೌರಿಯು ನವಿಲು ಚಿತ್ರವನ್ನು ಬಿಡಿಸಿದ ಪ್ರಸಂಗವನ್ನು ತಿಳಿಸಿ.
8. ಕಡಲೆಕಾಯಿ ತಿನ್ನುವ ಸಂದರ್ಭವನ್ನು ಕುರಿತು ಬರೆಯಿರಿ.

[P.T.O.

**III. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.** (4×10=40)

1. ಬಿಜ್ಜಳನು ಶಾಸ್ತ್ರಿಗಳ ವಿಚಾರಣೆಯ ಸಂದರ್ಭವನ್ನು ವಿಶ್ಲೇಷಿಸಿ.
2. ಬಸವಣ್ಣ ಮತ್ತು ಬಿಜ್ಜಳ ನಡುವಿನ ಸಂಘರ್ಷಕ್ಕೆ ಕಾರಣಗಳೇನು? ವಿಶದಪಡಿಸಿ.
3. ಸಂಕ್ರಾಂತಿ ನಾಟಕದ ಆಶಯವನ್ನು ವಿವರಿಸಿ.
4. ಒಡಲಾಳ ಕೃತಿಯಲ್ಲಿ ಬರುವ ಹಸಿವಿನ ಚಿತ್ರಣವನ್ನು ಬರೆಯಿರಿ.
5. ಸಾಕವ್ವನ ಪಾತ್ರವನ್ನು ವಿವರವಾಗಿ ಚಿತ್ರಿಸಿ.
6. ಪಿ.ಸಿ. ರೇವಣ್ಣನ ಯೋಜನೆಯು ಹೇಗೆ ವಿಫಲವಾಯಿತು? ವಿವರಿಸಿ.